(ಇ) ಕೈಗಾರಿಕೆಯ ಅರ್ಹತೆ, ವಿದ್ಯುಚ್ಛಕ್ತಿ ಅಗತ್ಯ, ಯೋಜನೆಯಲ್ಲಿ ಉದ್ದೇಶಿತ ಉದ್ಯೋಗಿಗಳ ಸಂಖ್ಯೆ, ಮಾಲಿನ್ಯ ಪರಿಣಾಮಗಳು, ನೀರಿನ ಅವಶ್ಯಕತೆ, ಅರ್ಜಿದಾರರು ಸ್ಥಳೀಯರೆ, ಹೊರಗಿನವರೆ, ಕೈಗಾರಿಕೆಯನ್ನು ನಡೆಸಲು ಅರ್ಜಿದಾರರ ಸಾಮರ್ಥ್ಯ ಇವುಗಳ ಆಧಾರದ ಮೇಲೆ ಅರ್ಜಿಗಳ ಪರಿಶೀಲನೆಯನ್ನು ಪರಿಶೀಲನಾ ಸಮಿತಿ ನಡೆಸುವುದು. ಮೇಲಿನ ಅಂಶಗಳ ಆಧಾರದ ಮತ್ತು ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಮೇಲೆ ರಾಜ್ಯಮಟ್ಟದ ಹಂಚಿಕೆ ಸಮಿತಿಯು ಅಂತಿಮ ತೀರ್ಮಾನ ಕೈಗೊಳ್ಳುವುದು.

(ಉ) ಇಲ್ಲ.

(ಊ) ಪ್ರಶ್ನೆ (ಈ)ಗೆ ಉತ್ತರಿಸಿರುವ ಪ್ರಕಾರ ಮಳಿಗೆಗಳನ್ನು ಅರ್ಹತೆ ಮತ್ತು ಸಂಭಾವ್ಯತೆ ಆಧಾರದ ಮೇಲೆ ಹಂಚಿಕೆ ಮಾಡುವುದರಿಂದ, ಪ್ರಯತ್ನಗಳನ್ನು ಪರಿಗಣಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ನಕಲಿ ಮೈಸೂರು ಸ್ಯಾಂಡಲ್ ಸೋಪು

೫೯೩. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).— ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ನಗರದ ಮಾರುಕಟ್ಟೆಯಲ್ಲಿ ನಕಲಿ ಮೈಸೂರು ಸ್ಯಾಂಡಲ್ ಸೋಪುಗಳನ್ನು ಮಾರಲ್ಪಡುತ್ತವೆ ಎಂಬುದು ನಿಜವೆ?

(ಆ) ಹಾಗಾದಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿರುವ ನಕಲಿ ಮೈಸೂರು ಸ್ಯಾಂಡಲ್ ಸೋಪುಗಳನ್ನು ಪತ್ತೆ ಹಚ್ಚಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು).—

(ಅ) ಬೆಂಗಳೂರು ನಗರದ ಮಾರುಕಟ್ಟೆಯಲ್ಲಿ ನಕಲಿ ಮೈಸೂರು ಸ್ಯಾಂಡಲ್ ಸೋಪು ಮಾರಾಟ ಮಾಡುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

(ಆ) ಉದ್ಭವಿಸುವುದಿಲ್ಲ.

೧೯೮೭ ರಿಂದ ೧೯೯೦ರ ಅವಧಿಯಲ್ಲಿ ಪ್ರಾರಂಭಿಸಿದ ಸಣ್ಣ ಪ್ರಮಾಣದ ಕೈಗಾರಿಕೆಗಳು

೫೯೪. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).— ಮಾನ್ಯ ಸಣ್ಣ ಕೈಗಾರಿಕೆಗಳ ಉಪ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ೧೯೮೭-೮೮ರಿಂದ ಮಾರ್ಚ್ ೯೦ರ ಅಂತ್ಯದವರೆಗೆ ಪ್ರಾರಂಭಿಸಲಾದ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ ಎಷ್ಟು ?

(ಆ) ಈ ಕೈಗಾರಿಕೆಗಳನ್ನು ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಯಿತು.

(ಇ) ಅವುಗಳ ಪೈಕಿ ರೋಗಗ್ರಸ್ಥವಾದ ಕೈಗಾರಿಕೆಗಳ ಸಂಖ್ಯೆ (ರೋಗಗ್ರಸ್ಥ ಕೈಗಾರಿಕೆಗಳ ವಿವರಗಳನ್ನು ನೀಡುವುದು)

(ಈ) ರೋಗಗ್ರಸ್ಥವಾದುದಕ್ಕೆ ಕಾರಣ.

ಶ್ರೀಮತಿ ಸಮಾ ವಸಂತ (ಸಣ್ಣ ಕೈಗಾರಿಕೆಗಳ ಉಪ ಸಚಿವೆಯರು).—

(ಅ) ೧೯೮೭-೮೮ರಿಂದ ಮಾರ್ಚ್ ೯೦ರ ಅಂತ್ಯದವರೆಗೆ ಪ್ರಾರಂಭಿಸಿದ ಸಣ್ಣ ಪ್ರಮಾಣದ ಕೈಗಾರಿಕೆಗಳು ಕೆಳಕಂಡಂತಿದೆ.—

ವರ್ಷ	ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ
೧೯೮೭-೮೮	೧೦,೫೩೦
೧೯೮೮-೮೯	೯,೮೧೧
೧೯೮೯-೯೦	೯,೭೦೦
ಒಟ್ಟು	೩೦,೦೪೧